# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 62/2015 ಪಿ.ಡಬ್ಲ್ಯೂಃ 2

ಸಿ .ಡಬ್ಲ್ಯೂಃ 5

ಸಾಕ್ಷಿದಾರರ ಹೆಸರು : ಮಂಜುನಾಥ ನಾಯ್ಕ

ತಂದೆಯ ಹೆಸರು : ಮಹಾದೇವ ನಾಯ್ಕ

ವಯಸ್ಸು : 34 ವರ್ಷ

ಉದ್ಯೋಗ : ದ್ವಿದಸ ಕೆ.ಜಿ.ಆಯ್ .ಡಿ ಕಚೇರಿ

ವಾಸ್ತವ್ಯ : ಕಾರವಾರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 06-12-2022

**ಮುಖ್ಯ ವಿಚಾರಣೆಃ ಎಪಿಪಿಯವರಿಂದಃ**

ನಾನು 2008 ರಿಂದ 2017 ರವರೆಗೆ ಅಲಾನಿ ವಿಭಾಗದಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ .

2. ದಿಃ 19-10-2014 ರಂದು 17-00 ಗಂಟೆಗೆ ಚಾಸಾ-1 ರವರೊಂದಿಗೆ ಹಾಗೂ ಸಿಬ್ಬಂದಿಗಳಾದ ಚಾಸಾ-4, 6 ,7 ,8 ರೊಂದಿಗೆ ಸಕಾರಿ ವಾಹನ ಸಂಖ್ಯೆ KA-30/G 347 ನೇದರ ಮೇಲಾಗಿ ಬೈತಕೋಲ್ ಬಳಿ ರಸ್ತೆ ಗಾವಲು ಮಾಡುತ್ತಿದ್ದೆವು . 18-30 ಗಂಟೆಗೆ ಚಾಸಾ-1 ರವರಿಗೆ ಬಾತ್ಮಿ ದಾರರು ಕರೆ ಮಾಡಿ ಗೋವಾ ರಾಜ್ಯದಿಂದ ಅಕ್ರಮವಾಗಿ ಮದ್ಯಗಳನ್ನು ಸಾಗಾಟ ಮಾಡಿ ಕೈ ಚೀಲದಲ್ಲಿ ಆರೋಪಿತನು ರಾ.ಹೆದ್ದಾರಿ - 66 ರ ರೇಂಜ್ ಪಾರೆಸ್ಟ ಕಚೇರಿಯ ಬಳಿ ನಿಂತಿರುವುದಾಗಿ ತಿಳಿಸಿದರು . 18-35 ಗಂಟೆಗೆ ಬೀಟ್ ಸರ್ಕಲ್ ಬಳಿ ಅಲ್ಲಿ ಸಿಕ್ಕ ಪಂಚರಾದ ಚಾಸಾ-2 ಮತ್ತು 3 ರವರಿಗೆ ವಿಷಯ ತಿಳಿಸಿ ಪಂಚರಾಗಿ ಸಹಕರಿಸಲು ಕೇಳಿದಾಗ ಅವರು ಒಪ್ಪಿದರು . 18-45 ಗಂಟೆಗೆ ಸ್ಥಳದಿಂದ ಹೊರಟು 18-50 ಗಂಟೆಗೆ ಅರಣ್ಯ ತಿರುವಿನ ಬಳಿ ಹೋದೆವು .ಅಲ್ಲಿಎಒಬ್ಬ ವ್ಯಕ್ತಿಯು ಕಪ್ಪು ಬಣ್ಣದ ಕೈ ಚೀಲವನ್ನು ಹಿಡಿದುಕೊಂಡು ನಿಂತಿರುತ್ತಾನೆ . ನಮ್ಮನ್ನು ನೋಡಿ ಗಾಬರಿಗೊಂಡು ಚೀಲವನ್ನು ಎಸೆದು ಪಶ್ಚಿಮ ದಿಕ್ಕಿಗೆ ಕಚ್ಚಾ ರಸ್ತೆಯಲ್ಲಿ ಓಡಿ ಹೋಗಿರುತ್ತಾನೆ . ನಮ್ಮ ಕೈಯಲ್ಲಿದ್ದ ಟಾರ್ಚ್ ಅನ್ನು ಹಾಗೂ ಬೀದಿ ದೀಪದ ಬೆಳವಿನಿಂದ ಆರೋಪಿತನನ್ನು ದೀಪಕ್ ತಾಂಡೇಲ್ ಎಂದು ಗುರುತಿಸಿರುತ್ತೇನೆ . ಆಗ 19-05 ಗಂಟೆ ಆಗಿರುತ್ತದೆ . ಚೀಲವನ್ನು ತೆಗೆದು ನೋಡಲಾಗಿ ಅದರಲ್ಲಿ 750 ಎಂ ಎಲ್ ನ ಲೈಟ್ ಹೌಸ್ ವಿಸ್ಕಿಯ 37 ಬಾಟಲುಗಳು ಇದ್ದವು . ಅವುಗಳ ಮೇಲೆ for sale in goa only ಎಂದುಕ ನಮೂದು ಆಗಿತ್ತು .

3. ರಾಸಾಯನಿಕ ಪರೀಕ್ಷೆಗಾಗಿ ಒಂದುಬಾಟಲನ್ನುತೆಗೆದು ಬಿಳಿ ಬಟ್ಟೆಯಿಂದ ಸುತ್ತಿ ಇಲಾಖಾ ಅರಗು ಹಾಗೂ ಚಾಸಾ-1 ಹಾಗೂ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಲಾಯಿತು . ಪಂಚನಾಮೆಯನ್ನು

19-10 ರಿಂದ 20-00 ಗಂಟೆಯವರೆಗೆ ಬರೆಯಲಾಯಿತು . ಈಗ ನಿಪಿ-1 ನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ . ಅದರ ಮೇಲಿರುವ ಸಹಿಯು ನನ್ನದೇ ಆಗಿರುತ್ತದೆ ಅದನ್ನು ನಿಪಿ-1ಬಿ ಎಂದು ಗುರುತಿಸಲಾಯಿತು . ಮುಮಾ-1 ನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ .

4. ದಿಃ 02-12-2014 ರಂದು ಆರೋಪಿತನು ನ್ಯಾಯಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಕಚೇರಿಗೆ ಹಾಜರಾಗಿರುತ್ತಾನೆ . ಘಟನಾ ದಿನದಂದು ಓಡಿ ಹೋದ ವ್ಯಕ್ತಿ ಹಾಗೂ ಠಾಣೆಗೆ ಬಂದ ವಕ್ತಿ ಇಂದು ನ್ಯಾಯಲಯದ ಮುಂದಿರುವ ವ್ಯಕ್ತಿಯು ಒಬ್ಬನೇ ಆಗಿರುತ್ತಾನೆ . ಚಾಸಾ-1 ರವರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಹಾಗೂ ಅಗತ್ಯವಾದ ಸಹಾಯ ಮಾಡಿರುತ್ತೇನೆ .

**<u>ಪಾಟೀ ಸವಾಲುಃ ಶ್ರೀ ಪಿ ಜಿ ಪಿ ವಕೀಲರಿಂದಃ</u>**

5. ಘಟನಾ ಸ್ಥಳಕ್ಕೆ ಹೋದ ಬಗ್ಗೆ ಠಾಣಾ ಡೈರಿಯಲ್ಲಿ ನಮೂದು ಇದೆ . ಮಾಹಿತಿ ಬಂದಾಗ ನಾವು ಬೈತಕೊಲದಲ್ಲಿ ಇದ್ದೆವು . ಘಟನಾ ಸ್ಥಳ ಜನ ನಿಬಿಡ ಪ್ರದೇಶ ಹಾಗೂ ವಾಹನ ಸಂಚಾರ ಇರುತ್ತದೆ ಎಂದರೆ ಸರಿ . ಪಂಚರನ್ನು ಬೀಟ್ ಸರ್ಕಲ್ ನಿಂದ ಕರೆತರಲಾಯಿತು . ಪಂಚರು ಘಟನಾ ಸ್ಥಳದವರು ಅಲ್ಲ ಎಂದರೆ ಸರಿ . ಪಂಚರು ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ . ಪಂಚನಾಮೆಯನ್ನು ಠಾಣೆಯಲ್ಲಿ ತಯಾರು ಮಾಡಲಾಗಿದೆ ಎಂದರೆ ಸರಿಯಲ್ಲ .ನಾನು ಘಟನಾ ಸ್ಥಳಕ್ಕೆ ಹೋಗಿಯೇ ಇಲ್ಲ , ಸ್ಥಳದಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿಲ್ಲ , ಆರೊಪಿತನ್ನು ನೋಡಿಲ್ಲ , ಅವರು ಯಾವುದೇ ಮುಮಾಗಳನ್ನು ತೆಗೆದುಕೊಂಡು ಹೋಗಿಲ್ಲ, ಮುಮಾಗೂ ಆರೋಪಿಗೂ ಯಾವುದೇ ಸಂಬಂಧ , ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ನನ್ನ ಮೇಲಾಧಿಕಾರಿ ಯಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿದ್ದ ಬೇವಾರಸುದಾರ ಸಾರಾಯಿಯನ್ನು ದುರುಪಯೋಗ ಪಡಿಸಿ ಆರೋಪಿತನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಲು ಚಾಸಾ-1 ರವರಿಗೆ ಸಾಹಯ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.**

**ಓ. ಹೇ.ಕೇ. ಸರಿ ಇದೆ.**

**C/c ಹೆ .ದ.ನ್ಯಾದಂ. ಕಾರವಾರ**